ಪೂರ್ವದಲ್ಲಿ ಎಂಜನಿಯರ್ ಡಿಸೈನ್ ಸ್ಕೆಚ್ ಹಾಕುವಂತೆಯೊ ಹೊಲಿಯುವ ಮೊದಲು ದರ್ಜಿ ಬಟ್ಟೆಯ ಮೇಲೆ ಕಡುವಿನ ಗೆರೆ ಎಳೆದು ಕತ್ತರಿಸುವಂತೆಯೊ ತಂತ್ರವನ್ನು ಒಂದು ಸೂತ್ರೋಪಾದಿಯಲ್ಲಿ ಎರಕದ ಅಚ್ಚನ್ನಾಗಿ ತಯಾರಿಸಿಟ್ಟುಕೊಳ್ಳಲು ಸಾಧ್ಯವಿಲ್ಲ; ಇದರರ್ಥ ಕಥೆಗೆ ತಾಂತ್ರಿಕ ವಿನ್ಯಾಸವೇ ಇರುವುದಿಲ್ಲ ಎಂದಲ್ಲ; ವಸ್ತು ಮತ್ತು ವಾಸ್ತು ಅವಿಚ್ಛಿನ್ನವಾಗಿರುತ್ತವೆ; ಮೀನಿಗೆ ಆ ಆಕಾರವಿರುವುದರಿಂದ ಈಜುವುದು ಸಾಧ್ಯವಾಗಿರುವಂತೆಯೇ ನೀರಿನ ಗುಣವೂ ಆ ಆಕಾರ ಪಡೆದುಕೊಳ್ಳಲು ಕಾರಣವಾಗಿರಬೇಕಲ್ಲವೆ? ಮುಖ್ಯವಾಗಿ ವಸ್ತುವನ್ನು ನೋಡುವ ಕ್ರಮದಲ್ಲೆ ಅದರ ನಿರೂಪಣಾ ತಂತ್ರದ ಜೀವಧಾರಣವಾಗುತ್ತದೆ. ಕಥಾ ನಿರೂಪಣೆಯ ಮೊದಲ ಹತ್ತು ಸಾಲುಗಳೇ ಮುಂದಿನ ಅದರ ನಡೆಯನ್ನು ನಿರ್ಧರಿಸಿ ಬಿಡುತ್ತವೆ ಎಂದ ಮಾರ್ಕ್ವೆಜ್‌ನ ಮಾತು ಈ ಸಂದರ್ಭದಲ್ಲಿ ಉಲ್ಲೇಖನೀಯ. “ನನ್ನ ಕಥೆಗಳನ್ನು ಬರೆಯುವುದರಲ್ಲಿ ನನ್ನ ಉದ್ದೇಶ ಒಂದೇ ಒಂದು ಎಂದು ನಾನು ಹಲವು ಸಂದರ್ಭದಲ್ಲಿ ಸೂಚಿಸಿದ್ದೇನೆ. ಆ ಉದ್ದೇಶ ಜೀವನ ನನಗೆ ನೀಡಿರುವ ದರ್ಶನವನ್ನು ವಿವರಿಸುವ ಚಿತ್ರಗಳನ್ನು ಕೊಡುವುದು...” ಎಂದು ಮಾಸ್ತಿಯವರು ಕಥೆಗಳ ಕುರಿತು ಹೇಳಿದ ಮಾತಿನಲ್ಲಿ ಅವರ ಜೀವನ ದರ್ಶನದಲ್ಲೆ ಸ್ಪಷ್ಟವಾಗುವ ತಂತ್ರದ ಸೂಚನೆಯಿದೆ. ಭಾರತದ ಮಾರ್ಗ ಪರಂಪರೆಯ ಕಥೆಗಳಿಗಿಂಥ ಕಾಲ್ದಾರಿಯ ಉಪಆಖ್ಯಾನಗಳ ಜಾನಪದ ಕಣಜಗಳಲ್ಲಿ ಹೊಸ ತಂತ್ರಗಳ ಅನ್ವೇಷಣೆ ಆಗಬೇಕಾಗಿದೆ. ಚಂದಮಾಮ ಕಥೆಗಳನ್ನೆ ನೋಡಿ. ಮೊದಲ ಸಲ ಅದನ್ನು ಕಂಡ ಜಾಗ ಮತ್ತು ಅದರೊಳಗಿನ ಜಗತ್ತು ಕಥೆಗೆ ಅಗತ್ಯವಿರುವ ಎಲ್ಲ ಸಂಗತಿಗಳನ್ನು ಕೊಟ್ಟಿದ್ದವು. ಬಾಲ್ಯದಲ್ಲಿ ಮೊಟ್ಟ ಮೊದಲ ಸಲ ಸಚಿತ್ರ ಚಂದಮಾಮ ಪುಸ್ತಕಗಳನ್ನು ನಾನು ನೋಡಿದ್ದು ಕಾಡಿನ ನಡುವಿನ ಅಕ್ಕನ ಒಂಟಿ ಮನೆಯ ನೀರವ ಮೆತ್ತಿಯ ಮೇಲೆ. ಆ ಮನೆಯ ಅಜಾನುಬಾಹು ಆಗಂತುಕ ನಿಗೂಢ ಮನುಷ್ಯ ಚಿಟ್ಟೆಯ ತಿರುವಿನಲ್ಲಿ ಕೂತು ನಕ್ಷತ್ರಗಳು ಮಿನುಗುವ ಮುಸ್ಸಂಜೆಯ ಹೊತ್ತಿಗೆ ಚಂದಮಾಮ ಕಥೆಗಳನ್ನು ನನಗೆ ಹೇಳುತ್ತಿದ್ದ. ಅಂಗಳದ ಬೆಳದಿಂಗಳು, ಚಿಟ್ಟೆಯ ಗೋಡೆಯ ಮೇಲೆ ಚಾಪೆ ಹಾಸಿ ಕುಳಿತ ನೆರಳುಗಳು, ನೀರವ ಗದ್ದೆಯಂಚಿಗೆ ಮಿಂಚುಹುಳುಗಳು ಈಜುವ ದಟ್ಟ ಕತ್ತಲು, ಜಗಲಿಯ ಹಳೆ ಮಂಚದ ಮೇಲೆ ಹೊಗೆ ಉಗುಳುತ್ತ ನೆಟ್ಟಗೆ ನಿಂತ ಚಿಮಣಿ ದೀಪ, ಮುದಿ ಸಂಪಿಗೆ ಮರದಲ್ಲಿ ಕೂತ ಗೂಬೆಯ ಕೂಗು ಕಥೆಯನ್ನು ಆಲಿಸಲು, ನಂಬಲು ಅಗತ್ಯವಿರುವ ಭಯದ ವಾತಾವರಣವನ್ನು ನಿರ್ಮಿಸಿದ್ದವು. ಕಥೆಯ ಒಳಗಂತು ಸ್ಮಶಾನ, ಶವದೊಳಗೆ ಆವೇಶಿತವಾಗಿ ಮರದ ಕೆಳಗೆ ನೇತಾಡುವ ಬೇತಾಳ, ಕತ್ತಿ ಹಿಡಿದು ಬೇತಾಳವನ್ನು ಹೆಗಲೇರಿಸಿಕೊಂಡು ಒಂಟಿ ನಡೆಯುತ್ತಿರುವ ಅಸಾಧಾರಣ ಧೈರ್ಯದ ರಾಜಾ ವಿಕ್ರಮ, ದಾರಿಯ ನಡುವೆ ಬೇತಾಳ ಹೇಳುವ ಕಥೆ ರೋಚಕವಾಗಿರುತ್ತಿತ್ತು. ವಿಕ್ರಮನ ಹೆಗಲ ಮೇಲೆ ಶವದ ಭಾರವಿದ್ದರೆ ಆಲಿಸುತ್ತಿದ್ದ ನನ್ನ ಮೇಲೆ ಭಯದ ಭಾರವಿತ್ತು. ಬೇತಾಳ ಕಥೆ ಮುಗಿಸಿ, ಅದು ಕೇಳಿದ ಒಗಟಿನ ಪ್ರಶ್ನೆಗಳಿಗೆ ವಿಕ್ರಮ ಉತ್ತರಿಸಿ ಬೇತಾಳ ಕಾಡಿನ ಮರಕ್ಕೆ ಎಂದಿನಂತೆ ಮರಳಿ ನನ್ನ ಭಯವೂ ಇಳಿಯುತ್ತಿತ್ತು; ಆಮೇಲೆ ಸಂತೋಷವಾಗುತ್ತಿತ್ತು. ಮಾಂತ್ರಿಕನಿಂದ ತಪ್ಪಿಸಿಕೊಳ್ಳುವ ಉಪಾಯವಾಗಿ ಬೇತಾಳ ಕಥೆ ಹೇಳುವುದು, ಅದು ಕೇಳುವ ಒಗಟಿಗೆ ಉತ್ತರಿಸುವಷ್ಟು ವಿಕ್ರಮ ಬುದ್ಧಿವಂತನಾಗಿರುವುದು, ಗೊತ್ತಿದ್ದೂ ಉತ್ತರ ಹೇಳದಿದ್ದರೆ ವಿಕ್ರಮನ ತಲೆ ಸಹಸ್ರ ಹೋಳಾಗುವುದು ಕಥೆಯ ಎರಡು ಪಠ್ಯಗಳನ್ನು ನಿರೂಪಿಸುವ ತಂತ್ರವಾಗಿಬಿಡುತ್ತದೆ. ಕಥೆಯ ನಿರಂತರ ಮುಂದುವರಿಕೆಗೆ ಮತ್ತೇನು ಬೇಕು?